ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 357/2015

ಸಿ ಡಬ್ಲ್ಯೂ-6

ಪಿ ಡಬ್ಲ್ಯೂ-4

ದಿಃ 28-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಕುಮಾರ ಬುದ್ದು ಗೌಡ |
| ತಂದೆಯ ಹೆಸರುಃ | ಬುದ್ದು |
| ವಯಸ್ಸುಃ | 46 ವರ್ಷ |
| ಉದ್ಯೋಗಃ | ರೈತಾಬಿ |
| ವಿಳಾಸಃ | ಹುಲಿದೇವರವಾಡ, ಅಂಕೋಲಾ. |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

(ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರ ಅನುಮತಿಯ ಮೇರೆಗೆ ಸಾಕ್ಷಿ ವಿಚಾರಣೆಯನ್ನು ತೆಗೆದುಕೊಳ್ಳಲಾಯಿತು.)

ನನಗೆ ಚಾಸಾ-1,4 ಮತ್ತು 5 ರವರ ಪರಿಚಯವಿರುವುದಿಲ್ಲ. ನನಗೆ ಈ ಪ್ರಕರಣದ ಮಾಹಿತಿ ಇರುವುದಿಲ್ಲ. ಸುಮಾರು 11 ವರ್ಷಗಳ ಹಿಂದೆ ನಾನು ನನ್ನ ಪ್ರಕರಣದ ಕುರಿತಾಗಿ ನ್ಯಾಯಾಲಯಕ್ಕೆ ಬಂದಿರುತ್ತೇನೆ, ಆದರೆ ಈ ಪ್ರಕರಣದಲ್ಲಿ ಏನಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣದಲ್ಲಿ ನಾನು ಏನನ್ನೂ ಮಾಡಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

2. ದಿಃ 09-04-2014 ರಂದು ನೀವು ನ್ಯಾಯಾಲಯಕ್ಕೆ ಬಂದಾಗ ಚಾಸಾ-1 ರವರು ಸಿಸಿ ನಂ.14/2012 ರಲ್ಲಿ ಹೆರಾಯಿನ್ ಅಕ್ರಮ ಪ್ರಕರಣದಲ್ಲಿ ಸಾಕ್ಷಿ ವಿಚಾರಣೆಗಾಗಿ ಬಂದಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಅವರ ಜೊತೆಗೆ ಚಾಸಾ-4 ಮತುತ 5 ರವರೂ ಸಹ ಬಂದಿದ್ದರು ಎಂದರೆ ಗೊತ್ತಿರುವುದಿಲ್ಲ. ಆಗ ಈ ಪ್ರಕರಣದ ಆರೋಪಿಯ ಹೆಂಡತಿಯ ವಿರುದ್ಧ ಸಾಕ್ಷಿ ಹೇಳಿದರೆ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಸದರಿ ಘಟನೆಯು ಸುಮಾರು ಮಧ್ಯಾಹ್ನ 1.55 ಗಂಟೆಗೆ ಆಗಿತ್ತು ಎಂದರೆ ಗೊತ್ತಿರುವುದಿಲ್ಲ. ಅದೇ ದಿನ ಚಾಸಾ-1 ರವರು ಮಾನ್ಯ ನ್ಯಾಯಾಲಯದ ಮುಂದೆಯೇ ದೂರನ್ನು ನೀಡಿರುತ್ತಾರೆ ಎಂದರೆ ಗೊತ್ತಿರವುದಿಲ್ಲ. ಈ ಎಲ್ಲ ಘಟನೆಗಳಿಗೂ ನೀವು ಪ್ರತ್ಯೆಕ್ಷ ಸಾಕ್ಷಿದಾರರು ಆಗಿದ್ದೀರಿ ಎಂದರೆ ಸರಿಯಲ್ಲ. ಈ ಘಟನೆಗೆ ಸಂಬಂಧಪಟ್ಟಂತೆ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಮಗೆ ಪ್ರಕರಣಕ್ಕೆ ಸಂಬಂಧಪಟ್ಟು ನಿಮಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಿಂದ ಇರುವುದಿಲ್ಲ.

<u>ಮರುವಿಚಾರಣೆ:</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.